**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.**

ದಿನಾಂಕಃ 23 ನೇ ಡಿಸೆಂಬರ ತಿಂಗಳು 2025 ರಂದು

ಸಿಸಿ ನಂ.**1522/2022**

ಫಿರ್ಯಾದುದಾರಃ ಅಶೋಕ ಬಸವಣ್ಣೆಪ್ಪ ಹಲಸೂರ.

ವಿರುದ್ಧ

ಆರೋಪಿಃ ಶಂಕರ ಚಂದ್ರಕಾಂತ ಕುಮಾರ

ಆರೋಪಣೆ

ಶ್ರೀ ಅಮೋಲ ಜಯಕುಮಾರ ಹಿರಿಕುಡೆ, ಪ್ರಭಾರ **1** ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹಾನಗಲ್ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಆರೋಪಣೆ ಹೊರಿಸುವುದೇನೆಂದರೆಃ

ಆರೋಪಿಯಾದ ನೀವು ದಿನಾಂಕಃ **05.01.2021** ರಂದು ನಿಮ್ಮ ವ್ಯಾಪಾರದ ಅಭಿವೃದ್ಧಿಗಾಗಿ ದೂರುದಾರನಿಂದ ರೂ**. 15,00,000/-** ಕೈಗಡ ಸಾಲವನ್ನು ಪಡೆದಿದ್ದು ಸದರಿ ಸಾಲವನ್ನು ತಾವು **6** ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದು ಸದರಿ ಅವಧಿಯಲ್ಲಿ ಸದರಿ ಕೈಗಡ ಸಾಲವನ್ನು ಮರುಪಾವತಿ ಮಾಡದ ಕಾರಣ ದೂರುದಾರನು ಸದರಿ ಸಾಲದ ಹಣವನ್ನು ಮರುಪಾವತಿಸಲು ಕೇಳಿಕೊಂಡಾಗ ನೀವು ನಿಮ್ಮ ಬಾಬ್ತು ಕೋಟಕ ಮಹೇಂದ್ರ ಬ್ಯಾಂಕ ಶಾಖೆ ಬೆಂಗಳೂರಿಗೆ ಸಂಬಂಧಿಸಿದ ಚೆಕ್ ಸಂಖ್ಯೆ **001142** ನೇದ್ದನ್ನು ರೂ**. 15,00,000/-** ದಿನಾಂಕಃ **25.10.2021** ಎಂದು ನಮೂದಿಸಿ ನೀವು ಸದರಿ ಚೆಕ್ಕನ್ನು ನೀಡಿದ್ದು ದೂರುದಾರ ಸದರಿ ಚೆಕ್ಕನ್ನು ತಮ್ಮ ಖಾತೆಯುಳ್ಳ ಕೆನರಾ ಬಾಂಕ್ ಬ್ರ್ಯಾಂಚ್ ಬೆಳಗಾಲಪೇಟೆ ನೇದ್ದರಲ್ಲಿ ನಗದಿಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ದಿಃ **15.11.2021** ರಂದು **Account Closed** ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯ ಮಾಡಿ ಕಳುಹಿಸಿರುತ್ತಾರೆ**.** ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮಗೆ ದೂರುದಾರ ಪರ ವಕೀಲರು ದಿಃ **14.12.2021** ರಂದು ನೊಂದಾಯಿತ ಅಂಚೆ ಮೂಲಕ

ನೋಟಿಸನ್ನು ನೀಡಿದ್ದು ಸದರಿ ನೋಟಿಸು ದಿನಾಂಕಃ **16.12.2021** ರಂದು ನಿಮಗೆ ಜಾರಿಯಾಗಿದ್ದರೂ ಸಹ ನೀವು ನಿಗದಿತ ಸಮಯದಲ್ಲಿ ದೂರುದಾರನ ಹಣ ಪಾವತಿ ಮಾಡಿಲ್ಲ**.** ಆದ್ದರಿಂದ ನೀವು ನೇಗೋಷಿಯೇಬಲ ಇನ್ಸ್ಟ್ರುಮೆಂಟ ಕಾಯ್ದೆ ಕಲಂ**.138** ನೇದ್ದರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ**.**

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

Sd/-

ಸ್ಥಳಃ ಹಾನಗಲ್ (ಶ್ರೀ ಅಮೊಲ ಜಯಕುಮಾರ ಹಿರಿಕುಡೆ,)

ದಿನಾಂಕಃ 23.12.2025 C/C 1 ನೇ ಹೆಚ್ಚುವರಿ ಹಿರಿಯ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು

ಹಾನಗಲ್.